ಕೆಲಸದ ವೇಳೆಯನ್ನು ದಿನಾಂಕ: 01.7.2006ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಮಾರ್ಪಡಿಸಿ ನಿಗದಿಪಡಿಸಲಾಗಿದೆ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 10.00 ರಿಂದ 17.30 ಗಂಟೆಯವರೆಗೆ ಮತ್ತು ಶನಿವಾರ ಬೆಳಿಗ್ಗೆ 10.00 ರಿಂದ 14.00 ಗಂಟೆಯವರೆಗೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಕರ್ನಾಟಕ ಅತ್ಯಾವಶ್ಯಕ ಸೇವೆಗಳು ಮತ್ತು ನಿರ್ವಹಣೆ ಅಧಿನಿಯಮದಡಿ ಅವಶ್ಯಸೇವೆ ಆಗಿರುವುದರಿಂದ ಹಾಗೂ ಸಂಸ್ಥೆಯ ಘಟಕ ಹಾಗೂ ಕಾರ್ಯಾಗಾರಗಳು ಶನಿವಾರದಂದು ಕಾರ್ಯ ನಿರ್ವಹಿಸುವ ಕಾರಣ ಅವುಗಳನ್ನು ನಿಯಂತ್ರಿಸುವ ಕಛೇರಿಗಳು ಸರ್ಕಾರದಲ್ಲಿ ಇರುವ ಪದ್ಧತಿಯಂತೆ ತಿಂಗಳ ಎರಡನೇ ಶನಿವಾರವನ್ನು ರಜೆಯೆಂದು ಘೋಷಿಸಲು ಸಮಂಜಸವಲ್ಲ.

ವಿಷಯ: ಭದ್ರಾವತಿ ಪೊಲೀಸ್ ಠಾಣೆಗಳ ವಾಹನಗಳನ್ನು ಹಿಂದಕ್ಕೆ ಪಡೆದಿರುವುದು

217(934) ಶ್ರೀ ಬಿ.ಕೆ. ಸಂಗಮೇಶ್ವರ್ (ಭದ್ರಾವತಿ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ತಾಲ್ಲೂಕು/ನಗರ ಪ್ರದೇಶವು ಸೂಕ್ಷ್ಮವಾದ ಪ್ರದೇಶವೆಂದು ಸರ್ಕಾರದ ಗಮನದಲ್ಲಿರುವುದೇ;

ಆ) ಇಲ್ಲಿನ ಘಟನೆಗಳ ವರದಿಗಳನ್ನು ಜಿಲ್ಲಾ ಪೊಲೀಸ್ ಇಲಾಖೆ ಸರ್ಕಾರಕ್ಕೆ ಸಲ್ಲಿಸುವುದಿಲ್ಲವೆ;

ಇ) ಭದ್ರಾವತಿ ತಾಲ್ಲೂಕಿನ ನಗರದ ಪೊಲೀಸ್ ಠಾಣೆಗಳಿಗೆ ನೀಡಲಾಗಿದ್ದ ವಾಹನಗಳ ವ್ಯವಸ್ಥೆಯನ್ನು ವಾಪಸ್ ಪಡೆಯಲು ಗೃಹ ಇಲಾಖೆಯು ಸೂಚನೆ ಆದೇಶ ನೀಡಿರುವುದೇ;

ಈ) ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್, ಶಿವಮೊಗ್ಗರವರು ಭದ್ರಾವತಿ ಪೊಲೀಸ್ ಠಾಣೆಗಳಿಂದ ವಾಹನಗಳನ್ನು ಹಿಂದಕ್ಕೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕಾನೂನು ಮತ್ತು ಶಾಂತಿ ಪಾಲನಾ ದೃಷ್ಟಿಯಿಂದ ಭದ್ರಾವತಿ ತಾಲ್ಲೂಕಿನ/ನಗರದ ಪೊಲೀಸ್ ಠಾಣೆಗಳಿಗೆ ಹಿಂದಿನಂತೆ ವಾಹನಗಳನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.

ಆ) ಹೌದು.

ಇ) ಇಲ್ಲ.

ಈ) ಠಾಣೆಗಳಿಗೆ ಒದಗಿಸಿದ ವಾಹನಗಳನ್ನು ಹಿಂದಕ್ಕೆ ಪಡೆದಿರುವುದಿಲ್ಲ.

ಉ) ವಾಹನಗಳನ್ನು ಈಗಾಗಲೇ ಒದಗಿಸಲಾಗಿದೆ (ಇದರಲ್ಲಿ ಹೊಯ್ಸಳ ವಾಹನವೂ ಸೇರಿದೆ).

ಶ್ರೀ ಬಿ.ಕೆ. ಸಂಗಮೇಶ್ವರ್ : ಮಾನ್ಯ ಅಧ್ಯಕ್ಷರೆ, ಭದ್ರಾವತಿ ಪ್ರದೇಶ ಸೂಕ್ಷ್ಮವಾದ ಪ್ರದೇಶವೆಂದು ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ನಮ್ಮ ಹಳೆಯ ನಗರದ ಪೊಲೀಸ್ ಸ್ಟೇಷನ್‌ನಲ್ಲಿ ಸಬ್‌ಇನ್ಸ್‌ಪೆಕ್ಟರ್‌ರವರಿಗೆ ಅವರಿಂದ ಆ ಜೀಪನ್ನು ವಾಪಸ್ಸು ತೆಗೆದುಕೊಳ್ಳುವಂತೆ ಸರ್ಕಾರ ಆದೇಶ ಮಾಡಿದ್ದಾರೆಂದು ಹೇಳಿದ್ದಾರೆ. ನಮ್ಮ ಹಳೆಯ ನಗರದ ವ್ಯಾಪ್ತಿಗೆ ಬರತಕ್ಕಂಥ ಪೊಲೀಸ್ ಸ್ಟೇಷನ್‌ನಲ್ಲಿರುವ ಸಬ್ ಇನ್ಸ್‌ಪೆಕ್ಟರ್‌ರವರು ಜೀಪ್ ಇಲ್ಲದೆ ಬುಲೆಟ್‌ನಲ್ಲಿ ಓಡಾಡತಕ್ಕಂಥ ಪರಿಸ್ಥಿತಿ ಇದೆ. ತಾವು ಬೇಕಾದರೆ ಗಮನಹರಿಸಬಹುದು. ಇವತ್ತಿನದಿವಸ ಭದ್ರಾವತಿ ಪ್ರದೇಶದಲ್ಲಿ ಎಂಥಂಥ ಘಟನೆಗಳು ನಡೆಯುತ್ತಿವೆ ಎನ್ನತಕ್ಕಂಥದ್ದು ತಮಗೆಲ್ಲಾ ಗೊತ್ತಿದೆ. ಇವೆಲ್ಲವನ್ನೂ ತಾವು ಅರ್ಥಮಾಡಿಕೊಂಡು ದಯವಿಟ್ಟು ಹಳೆಯ ನಗರದ ಸಬ್‌ಇನ್ಸ್‌ಪೆಕ್ಟರ್‌ರವರು ಓಡಾಡುವುದಕ್ಕೆ ಜೀಪಿನ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ ಮೊದಲು ಅಂದರೆ ಗ್ರಾಮಾಂತರ ಪೊಲೀಸ್ ಸ್ಟೇಷನ್‌ಗೆ ಒಂದು ಜೀಪ್‌ನ್ನು ಕೊಡಲಾಗಿದೆ. ಆದರೆ, ಆ ಜೀಪ್ ದುಸ್ಥಿತಿಯಲ್ಲಿ ಇಲ್ಲ ಎಂಬ ಕಾರಣದಿಂದ ಹೊಸ ಜೀಪ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಭದ್ರಾವತಿಯಲ್ಲಿರತಕ್ಕಂಥ ಕಾನೂನಿನ ಪರಿಸ್ಥಿತಿ ಮತ್ತು ಅದರ ಅಗಾಧತೆಯನ್ನು ಮನಗೊಂಡು ಭದ್ರಾವತಿ ಡಿ.ಎಸ್.ಪಿ. ರವರಿಗೆ ಒಂದು ಜೀಪ್, ಸಿಪಿಐ ಭದ್ರಾವತಿ ಟೌನ್ ವೃತ್ತಕ್ಕೆ ಒಂದು ಜೀಪ್, ಹಳೆಯನಗರ ಠಾಣೆ ಭದ್ರಾವತಿಗೆ ಒಂದು ಜೀಪ್, ಎರಡು ಮೋಟರ್ ಸೈಕಲ್ ಮತ್ತೆ ನ್ಯೂಟೌನ್ ಠಾಣೆ ಭದ್ರಾವತಿ ಒಂದು ಜೀಪ್ ಒಂದು ಮೋಟರ್ ಸೈಕಲ್, ಪ್ರಾಜೆಕ್ಟ್ ಠಾಣೆ ಭದ್ರಾವತಿ ನಾಲ್ಕು ಮೋಟರ್ ಸೈಕಲ್, ಸಿಪಿಐ ಭದ್ರಾವತಿ ಗ್ರಾಮಾಂತರ ವೃತ್ತ ಒಂದು ಜೀಪ್, ಪೇಪರ್ ಟೌನ್ ಭದ್ರಾವತಿಗೆ ಒಂದು ಮೋಟರ್ ಸೈಕಲ್, ಭದ್ರಾವತಿ ಗ್ರಾಮಾಂತರ ಠಾಣೆಗೆ ಒಂದು ಜೀಪ್ ಎರಡು ಮೋಟರ್ ಸೈಕಲ್ ಹೊಳೆಹೊನ್ನೂರು ಠಾಣೆ ಒಂದು ಜೀಪ್–ಈ ರೀತಿಯಾಗಿ ಎಲ್ಲಾ ಕಡೆ ವಾಹನಗಳನ್ನು ಒದಗಿಸಿದ್ದೇವೆ. ತಾವು ಕೇಳಿರತಕ್ಕಂಥ ಗ್ರಾಮಾಂತರ ಠಾಣೆಗೆ ಒಂದು ಹೊಸ ಜೀಪ್‌ನ್ನು ಒದಗಿಸಿಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮ ಸಬ್ ಇನ್ಸ್‌ಪೆಕ್ಟರ್ ಹತ್ತಿರ ಇರತಕ್ಕಂಥ ಒಂದು ಜೀಪ್ ಕೂಡ ಮುಂದಕ್ಕೆ ಹೋಗುವುದಿಲ್ಲ. 1950 ಅಥವಾ 1960ನೇ ಸಾಲಿನ ಜೀಪ್‌ಗಳನ್ನು ಅವರಿಗೆ ಕೊಟ್ಟಿದ್ದೀರಿ. ಮೊನ್ನೆ ದಿವಸ ನಾನು ಅಕಸ್ಮಾತ್ ಆಗಿ ಅಂದಲ್ ಕೆರೆ ಪೊಲೀಸ್ ಸ್ಟೇಷನ್‌ಗೆ ಸಂಬಂಧಪಟ್ಟಂಥ ಜೀಪ್ ಹತ್ತಿ ಕುಳಿತುಕೊಂಡೆ. ಆ ಜೀಪ್ ಮುಂದಕ್ಕೆ ಹೋಗಲಿಲ್ಲ. ಈ ರೀತಿಯಾದ ವಾಹನವನ್ನು ಪೊಲೀಸ್‌ನವರು ಇಟ್ಟುಕೊಂಡರೆ ಗತಿ ಏನು? ಒಳ್ಳೆಯ ವಾಹನಗಳನ್ನು ದಯಮಾಡಿ ಅವರಿಗೆ ಕೊಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಿನಿಮಮ್ ವೈಟ್ ಎಂದು ಜೀಪ್‌ಗಳಿಗೆ ನಿಗದಿ ಮಾಡಿರುತ್ತಾರೆ. ತೂಕ ಜಾಸ್ತಿ ಆದಂಥ ಸಂದರ್ಭದಲ್ಲಿ ಅವುಗಳು ಮುಂದಕ್ಕೆ ಹೋಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಜಾಸ್ತಿ ತೂಕ ತೆಗೆದುಕೊಂಡು ಹೋಗತಕ್ಕಂಥ ವಾಹನಗಳನ್ನೇ ಕೊಡಿ. ಅಲ್ಲಿರತಕ್ಕಂಥ ಜೀಪ್‌ಗಳನ್ನು ಹಿಂದಕ್ಕೆ ತೆಗೆದುಕೊಂಡು ಬೇರೆ ಜೀಪ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗ ನಕ್ಸಲೇಟ್ಸ್ ಅಫೆಕ್ಟೆಡ್ ಬಾರ್ಡರ್ ಏರಿಯಾ ಆಗಿದೆ. ನಮ್ಮಲ್ಲಿಗೆ ಮೂರು ಜೀಪ್‌ಗಳನ್ನು ಸ್ಯಾಂಕ್ಷನ್ ಮಾಡಿದ್ದರು. ಈಗ ಆ ಮೂರರಲ್ಲಿ ಎರಡು ನಿಂತು ಹೋಗಿವೆ. ಒಂದೇ ಒಂದು ಜೀಪ್ ಸರ್ಕಲ್ ಇನ್ಸ್‌ಪೆಕ್ಟರ್ ಹತ್ತಿರ ಇದೆ. ಇದು ಕೂಡ ವಾರಕ್ಕೆ ಎರಡು ಸಲ ವರ್ಕ್‌ಶಾಪ್‌ಗೆ ಹೋಗುತ್ತದೆ. ನಿಮಗೆ ಗೊತ್ತಿರುವ ಪ್ರಕಾರ ಒಂದು ಸಾರಿ ವರ್ಕ್‌ಶಾಪ್‌ಗೆ ಹೋದಾಗ ಅದಕ್ಕೆ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿ ಕೆಲಸ ಮಾಡಬೇಕಾಗಿರುವುದರಿಂದ ಆ ಜೀಪ್ ಕೂಡ ಇಲ್ಲದಂತೆ ಆಗಿದೆ. ಇಲ್ಲಿಗೆ ಆದ್ಯತೆ ಮೇರೆಗೆ ಕೊಟ್ಟಿರತಕ್ಕಂಥ ಈ ಮೂರು ಜೀಪ್‌ಗಳು. ಈಗ ಯಾವುದೂ ಕೂಡ ಮುಂದಕ್ಕೆ ಹೋಗುತ್ತಿಲ್ಲ. ಆದ್ದರಿಂದ ಹೊಸ ಜೀಪ್‌ಗಳನ್ನು ದಯವಿಟ್ಟು ಸರಬರಾಜು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ಪೊಲೀಸ್ ಇಲಾಖೆಯಲ್ಲಿರತಕ್ಕಂಥ ವಾಹನಗಳು ಹೈದರಾಲಿ ಕಾಲದ ವಾಹನಗಳು.

ಅಧ್ಯಕ್ಷರು : ಪೊಲೀಸ್ ವಾಹನಗಳ ಬಗ್ಗೆ ಇಷ್ಟು ಚರ್ಚೆಯಾದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆ ವಾಹನಗಳಲ್ಲಿ ಲೈಟ್ ಇಲ್ಲ, ಬ್ರೇಕ್ ಇಲ್ಲ, ಟ್ಯಾಂಕ್ ಕೆಟ್ಟು ಹೋಗಿದೆ, ಟೈರ್, ಟ್ಯೂಬ್ ಇಲ್ಲ ಪೊಲೀಸ್‌ನವರೇ ಅವುಗಳನ್ನು ತಳ್ಳಬೇಕು. ಈ ರೀತಿಯಾದರೆ ಇವರು ಕಳ್ಳರನ್ನು ಯಾವರೀತಿಯಾಗಿ

ಹಿಡಿಯುವುದಕ್ಕೆ ಆಗುತ್ತದೆ? ಪೋಲೀಸ್‌ನವರು ಜೀಪ್‌ನ್ನು ತಳ್ಳಿಕೊಂಡು ಕುಳಿತುಕೊಂಡರೆ ಇವರು ಕಳ್ಳರನ್ನು, ಖದೀಮರನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀವು ಪರಿಣಾಮಕಾರಿಯಾಗಿ ಪ್ರತಿ ಸ್ಟೇಷನ್‌ಗಳಿಗೆ ಒಳ್ಳೆಯ ವಾಹನಗಳನ್ನು ಮತ್ತು ಒಳ್ಳೆಯ ಶಸ್ತ್ರಾಸ್ತ್ರ ಕೊಡದೆ ಸುಮ್ಮನೆ ಇಲ್ಲಿ ಉದ್ದುದ್ದವಾದ ಭಾಷಣ ಮಾಡಿದರೆ ಏನೂ ಆಗುವುದಿಲ್ಲ. ಆದ್ದರಿಂದ ನಿಮ್ಮಲ್ಲಿ ಕೆಟ್ಟಿರತಕ್ಕಂಥ ಎಲ್ಲಾ ವಾಹನಗಳನ್ನು ಸಂಪೂರ್ಣವಾಗಿ ಹಿಂದಕ್ಕೆ ಪಡೆದು ಹೊಸ ವಾಹನಗಳನ್ನು ಕೊಡತಕ್ಕಂಥದ್ದನ್ನು ತಾವು ಜಾರಿ ಮಾಡುತ್ತೀರಾ ಎಂಬುದನ್ನು ದಯವಿಟ್ಟು ಹೇಳಬೇಕು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಹೈದರಾಲಿ ಇದ್ದದ್ದು 1750, 1760ರ ಸಾಲಿನಲ್ಲಿ ಮತ್ತು 1799ರಲ್ಲಿ ಟಿಪ್ಪು ಸುಲ್ತಾನ್ ಸತ್ತು ಹೋದ. ಆ ಕಾಲದಲ್ಲಿ ವಾಹನಗಳನ್ನು ಇನ್ನೂ ಕಂಡು ಹಿಡಿದಿರಲಿಲ್ಲ. ಆದ್ದರಿಂದ ಅವತ್ತಿನ ಕಾಲದ ವಾಹನಗಳನ್ನು ಇಟ್ಟುಕೊಳ್ಳತಕ್ಕಂಥ ಪ್ರಶ್ನೆ ಬರುವುದಿಲ್ಲ. ಆ ಕಾಲದಲ್ಲಿ ಎತ್ತಿನ ಗಾಡಿಗಳು ಇದ್ದವು.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಸಚಿವರೆ, ಆ ಕಾಲದ ವಾಹನಗಳು ಇದ್ದರೆ ಅವುಗಳನ್ನು ಸಂರಕ್ಷಿಸಬೇಕು.

ಶ್ರೀ ಹೆಚ್. ಆಂಜನೇಯ : ಆ ಕಾಲದಲ್ಲಿ ಕೇವಲ ಕುದುರೆಗಳು ಮಾತ್ರ ಇದ್ದವು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರು ಈಗ ಕೊಟ್ಟಿರತಕ್ಕಂಥ ಸಲಹೆಗಳು ಬಹಳ ಉತ್ತಮವಾದಂಥ ಸಲಹೆಗಳಾಗಿವೆ. ಇವುಗಳನ್ನು ನವೀಕರಣಗೊಳಿಸಬೇಕಾಗಿರುವುದಕ್ಕೆ ನಮ್ಮ ಹತ್ತಿರ ಹಣ ಇದೆ. ಆದ್ದರಿಂದ ಇದರ ಬಗ್ಗೆ ಪ್ರತಿಯೊಂದು ಕಡೆ ಗಮನಹರಿಸುತ್ತೇವೆ. ಮಾನ್ಯ ಸಂಗಮೇಶ್ವರರವರು ಪ್ರಶ್ನೆ ಕೇಳಿದ್ದಾರೆ. ಅವರು ಕೇಳಿರತಕ್ಕಂಥ ಕಡೆ ಹೊಸ ಜೀಪ್‌ನ್ನು ಕಳುಹಿಸಿಕೊಡತಕ್ಕಂಥ ಕೆಲಸ ಮಾಡುತ್ತೇವೆ. ಮತ್ತೆ ತಾವೆಲ್ಲರೂ ಕೂಡ ಈ ವಿಷಯ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ ಎಲ್ಲಾ ಕಡೆ ಬದಲಾವಣೆ ಮಾಡತಕ್ಕಂಥ ಕೆಲಸವನ್ನು ನಾವು ಕೈಗೊಳ್ಳುತ್ತೇವೆ.

ವಿಷಯ: ಹುಬ್ಬಳ್ಳಿ ಧಾರವಾಡ ನಗರ ಪಾಲಿಕೆಗೆ ನೀಡಿದ ಎಸ್.ಎಫ್.ಸಿ. ಗ್ರ್ಯಾಂಟ್.

218(958) ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2006–07ನೇ ಸಾಲಿನಲ್ಲಿ ಹುಬ್ಬಳ್ಳಿ– ಧಾರವಾಡ ಪಾಲಿಕೆಗೆ ನೀಡಿದ ಎಸ್.ಎಫ್.ಸಿ. ಗ್ರ್ಯಾಂಟ್ ಎಷ್ಟು: (ತಿಂಗಳುವಾರು ವಿವರ ನೀಡುವುದು):